ಇ-ಮೇಲ್ obccell@uni-mysore.ac.in
ದೂರವಾಣಿ ಸಂಖ್ಯೆ. 0821-2419 906

# ಮೈಸೂರು ವಿಶ್ವವಿದ್ಯಾನಿಲಯ

(4.0 ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)
(ಎನ್‌ಐಆರ್‌ಎಫ್-2020 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 27ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 47ನೇ ಸ್ಥಾನ)

ಹಿಂದುಳಿದ ವರ್ಗಗಳ ಘಟಕ ಕಛೇರಿ
ಸೆನೆಟ್ ಭವನ, ಮಾನಸಗಂಗೋತ್ರಿ
ಮೈಸೂರು-570 006

ಸಂಖ್ಯೆ.ಹಿವಘ/ಜಿಎಲ್.1/13 /2024-25 ದಿನಾಂಕ: 05.06.2024

## ಅಧಿಸೂಚನೆ

ವಿಷಯ: ಮೈಸೂರು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಘಟಕದ ವತಿಯಿಂದ 2023-24ನೇ ಸಾಲಿನ ಅರ್ಹ 20 ಸಂಶೋಧನಾ ಹಿಂದುಳಿದ ವರ್ಗಗಳ ವಿದ್ಯಾಥಿಗಳಿಗೆ ಶಿಷ್ಯವೇತನ ನೀಡಲು ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ : 1. ಸ್ಥಾಯಿ ಸಮಿತಿಯ ಶಿಫಾರಸ್ಸಿನ ಸಭೆಯ ದಿನಾಂಕ: 20.11.2023.
2. ಸಿಂಡಿಕೇಟ್ ಸಭೆಯ ತೀರ್ಮಾನದ ದಿನಾಂಕ : 22.12.2023.

ಮೈಸೂರು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಘಟಕದ ವತಿಯಿಂದ ಯುಜಿಸಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ನಿಯಮ್ಮಾವಳಿಗಳ ಪ್ರಕಾರ ಸಂಶೋಧನಾ ಕಾರ್ಯವನ್ನು ನಿರ್ವಹಿಸುವ ಸಂಶೋಧನ ವಿದ್ಯಾರ್ಥಿಗಳಿಗೆ **ಶಿಷ್ಯವೇತನ ನೀಡುವ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯಲ್ಲಿ ಶೇ. 55ಕ್ಕಿಂತ ಹೆಚ್ಚು ಅಂಕ** ಪಡೆದಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ 2023-24 ಸಾಲಿನ 20 ಸಂಶೋಧನಾ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 12.000ಗಳಂತೆ 03 ವರ್ಷದ ಅವಧಿಗೆ ಆಯ್ಕೆ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿ ಶುಲ್ಕ **ರೂ. 200/-(ಇನ್ನೂರು ರೂಪಾಯಿಗಳು ಮಾತ್ರ)** ಗಳನ್ನು ಮೈಸೂರು ವಿಶ್ವವಿದ್ಯಾನಿಲಯ ಖಾತೆ ಸಂಖ್ಯೆ : **54007591471 ಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕ್ರಾಫರ್ಡ್ ಭವನ** ಆವರಣ ಶಾಖೆಯಲ್ಲಿ ಜಮಾ ಮಾಡಿರುವ ಮೂಲ ಚಲನ್ ಅನ್ನು ಅರ್ಜಿಯ ಜೊತೆಗೆ ಲಗತ್ತಿಸಿ, **ಸಂಯೋಜನಾಧಿಕಾರಿಗಳು, ಹಿಂದುಳಿದ ವರ್ಗಗಳ ಘಟಕ, ಸೆನೆಟ್ ಭವನ, ಮಾನಸಗಂಗೋತ್ರಿ ಮೈಸೂರು** ಕಛೇರಿಗೆ ಸಲ್ಲಿಸಬೇಕು. ನಿಗಧಿತ ನಮೂನೆಯ ಅರ್ಜಿಗಳನ್ನು **ದಿನಾಂಕ: 10.06.2024** ಸಮಯ: 10.00 ರಿಂದ 5:30ವರೆಗೆ ಕಛೇರಿ ವೇಳೆಯಲ್ಲಿ ಅರ್ಜಿಗಳನ್ನು ಪಡೆಯಬಹುದಾಗಿದೆ, ಹಾಗೂ ಭರ್ತಿ ಮಾಡಿರುವ ಅರ್ಜಿಗಳನ್ನು **ದಿನಾಂಕ: 01.07.2024** ಸಂಜೆ 5.30 ಗಂಟೆಯೊಳಗೆ ಹಿಂದುಳಿದ ವರ್ಗಗಳ ಘಟಕದ ಕಛೇರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

**ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕರ್ನಾಟಕ ರಾಜ್ಯದವರಾಗಿದ್ದು, ಹಾಗೂ ಮೈಸೂರು ವಿಶ್ವವಿದ್ಯಾನಿಲಯದಿಂದ (ಸ್ವಾಯತ್ತ ಸಂಸ್ಥೆಗಳನ್ನು ಹೊರತುಪಡಿಸಿ) ಸ್ನಾತಕೋತ್ತರ ಪದವಿಯನ್ನು ಹೊಂದಿರಬೇಕು. ಅಪೂರ್ಣಗೊಂಡ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

1. **ವಯೋಮಿತಿ:** 23 ವರ್ಷ ಕನಿಷ್ಟ ವಯಸ್ಸು, ಹಾಗೂ 35 ವರ್ಷ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.
2. **ಜಾತಿ ಮತ್ತು ಆದಾಯ ಪ್ರಮಾಣ ಪತ್ರ:**
   ವಿದ್ಯಾರ್ಥಿ ಮತ್ತು ಕುಟುಂಬದ ಒಟ್ಟು ವಾರ್ಷಿಕ ಆದಾಯಮಿತಿ ಕೆಳಕಂಡಂತಿರಬೇಕು.
   a. Category-I ರೂ.4.50 ಲಕ್ಷಗಳು ಹಾಗೂ Category-II(A), II(B), III(A) and III(B) Rs.3.50 ಲಕ್ಷಗಳು ವಾರ್ಷಿಕ ಆದಾಯವನ್ನು ಮೀರಿರಬಾರದು.
   b. ಆದಾಯ ಮತ್ತು ಜಾತಿ ಪ್ರಮಾಣ ಪತ್ರವು ಅಧಿಸೂಚನೆ ಹೊರಡಿಸಿದ ದಿನಾಂಕದಲ್ಲಿ ಚಾಲ್ತಿಯಲ್ಲಿರಬೇಕು (Valid Income & Caste Certificate)
3. **ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು:**

a. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯದ ನೇರ ಅಧೀನಕ್ಕೊಳಪಟ್ಟಿರಬೇಕು. (ಮಾನಸ ಗಂಗೋತ್ರಿ ಮತ್ತು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಮಾತ್ರ ಸಂಶೋಧನೆ ಮಾಡುತ್ತಿರಬೇಕು)

b. ಶುಲ್ಕ ಪಾವತಿಸಿದ ಮೂಲ ಚಲನ್.



Scanned with OKEN Scanner